1 ಸಿ. ಇ. ಟಿ/ನೀಟ್ ಇಂದ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವೈದ್ಯಕೀಯ MBBS ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಭೋದನಾ ಶುಲ್ಕದ 50% ಗರಿಷ್ಠ ರೂ. 2. 00 ಲಕ್ಷಗಳವರೆಗೆ ಸಾಲವನ್ನು ನೀಡಲಾಗುತ್ತದೆ.

2 ಸಿ. ಇ. ಟಿ ಇಂದ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ಬಿಡಿಎಸ್ ವಿದ್ಯಾರ್ಥಿಗಳಿಗೆ ಬೋಧನ ಶುಲ್ಕ ಮಾತ್ರ ರೂ. 30. 000/- ಸಾಲ ನೀಡಲಾಗುತ್ತದೆ.

3 ಸಿ. ಇ. ಟಿ ಇಂದ ಅಂದರೆ ಇಂಜಿನಿಯರಿಂಗ್, ಆಯುರ್ವೇದ, ಐ. ಎಸ್. ಎಂ. ಹೆಚ್, ವಿದ್ಯಾಭ್ಯಾಸ ಪಡೆಯಲು ಇತರೆ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ರೂ. 30, 000/- ಸಾಲ ನೀಡಲಾಗುತ್ತದೆ.

2. **ಶ್ರಮಶಕ್ತಿ ಯೋಜನೆ:-**

ಜಿಲ್ಲೆಯ ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕುಲಕಸುಬುದಾರರು ಆಧುನಿಕ ತಂತ್ರಜ್ಞಾನ ಬಳಕೆಯಿಂದಾಗಿ ತಮ್ಮ ಸಾಂಪ್ರದಾಯಿಕ ಮಾರುಕಟ್ಟೆಯನ್ನು ಹಾಗೂ ವೃತ್ತಿಕೌಶಲತೆಗೆ ಅನುಗುಣವಾಗಿ ಅಭಿವೃದ್ಧಿ ಪಡಿಸಿಕೊಳ್ಳಲು ಮತ್ತು ಆದಾಯ ಹೆಚ್ಚಿಸುವ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಅಗತ್ಯವಿರುವ ಆರ್ಥಿಕ ನೆರವನ್ನು ಕಲ್ಪಿಸುವ ಉದ್ದೇಶದಿಂದ, 'ಶ್ರಮಶಕ್ತಿ' ಯೋಜನೆಯಡಿಯಲ್ಲಿ ಘಟಕ ವೆಚ್ಚವನ್ನು ರೂ. 25, 000/- ದಿಂದ ರೂ. 50, 000/-ಕ್ಕೆ ಹೆಚ್ಚಿಸಿ ಸರ್ಕಾರವು ಅದೇಶ ಹೊರಡಿಸಿದೆ. ಘಟಕ ವೆಚ್ಚ ರೂ. 50, 000/-ಗಳ ಸಾಲದ ಮಂಜೂರಾತಿಯು ಸಾಂಪ್ರದಾಯಿಕ (ಪಾರಂಪರಾಗತ ಕುಶಲಕರ್ಮಿಗಳು/ವೃತ್ತಿ ಕುಲಕಸುಬುದಾರರಿಗೆ ಅನ್ವಯವಾಗುತ್ತದೆ. ಶ್ರಮಶಕ್ತಿ ಯೋಜನೆಯಡಿಯಲ್ಲಿ ಸಾಲ ಮಂಜೂರಾದ ಫಲಾನುಭವಿಗಳ ಬ್ಯಾಂಕ್ ಖಾತೆ ಮತ್ತು ಐಎಫ್ಎಸ್‌ಸಿ ಸಂಖ್ಯೆ ಮತ್ತು ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರದ ಮೊದಲನೆ ಪುಟ ಕೇಂದ್ರ ಕಛೇರಿಗೆ ಸಲ್ಲಿಸಬೇಕು, ಸಾಲ ಪಡೆದು ಫಲಾನುಭವಿಯು ಉದ್ದೇಶಿತ ವೃತ್ತಿಗೆ ಮಾತ್ರ ಸಾಲವನ್ನು ಬಳಸಿಕೊಳ್ಳಬೇಕು.

ಆಯ್ಕೆ ವಿಧಾನ:-

ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ. ಇದರಲ್ಲಿ ಶೇ. 50ರಷ್ಟು ಸಾಲವನ್ನು ಬ್ಯಾಕ್‌ಎಂಡ್ ಸಹಾಯಧನವಾಗಿ ಪರಿಗಣಿಸಲಾಗುವುದು. ಈ ಸಾಲಕ್ಕೆ ಸಾಲಿಯಾನ ಶೇ. 4ರ ಬಡ್ಡಿದರ ವಿಧಿಸಲಾಗುವುದು. ಮೂರು ವರ್ಷದ ಅವಧಿಯೊಳಗೆ ಸಾಲ ಮರುಪವಾತಿಸಿದಾಗ ಮಾತ್ರ ಶೇ. 50ರಷ್ಟು ಸಹಾಯಧನವನ್ನು ಬ್ಯಾಕ್‌ಎಂಡ್

MJ

ಸಬ್ಸಿಡಿಯಾಗಿ ಸಾಲದ ಖಾತಾ ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ತಪ್ಪಿದಲ್ಲಿ ಪೂರ್ಣ ಮೊತ್ತವನ್ನು ಸಾಲವನ್ನಾಗಿ ಪರಿಗಣಿಸಲಾಗುವುದು. ಯೋಜನೆ ಉದ್ದೇಶಕ್ಕಾಗಿ ಗುರ್ತಿಸಲಾದ ಸಾಂಪ್ರದಾಯಿಕ (ಪರಂಪರಾಗತ) ಕುಶಲಕರ್ಮಿಗಳು/ ವೃತ್ತಿ ಕಸುಬುಗಳಿಗೆ ಸಾಲಸೌಲಭ್ಯ ನೀಡಲಾಗುವುದು.

3) ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ:-

ಈ ಯೋಜನೆಯಡಿಯಲ್ಲಿ ನಗರ ಪ್ರದೇಶದಲ್ಲಿ ಮತ್ತು ಗ್ರಾಮಗಳಲ್ಲಿ ವಾಸವಾಗಿರುವ ಮತೀಯ ಅಲ್ಪಸಂಖ್ಯಾತರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು, ಅಂತಹ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಕುಶಲ ಅಥವಾ ಕುಶಲಯಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಣದ ವ್ಯಾಪಾರವನ್ನು ಮಾಡಲು ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ನಿಗಮದಿಂದ ಫಲಾಪೇಕ್ಷಿಗಳು ಸ್ವ-ಸಹಾಯ ಗುಂಪುಗಳನ್ನು ಇತರೆ ಇಲಾಖೆಗಳ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಘಟನೆ ಮಾಡಿ ಸ್ವ ಸಹಾಯ ಗುಂಪುಗಳ ಮೂಲಕ ಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸ್ವ-ಸಹಾಯ ಗುಂಪಿನ ಗಾತ್ರ 10 ಜನ ರಿಂದ 20ಜನ ವರೆಗೆಮಾತ್ರ ಮಿತಿಗೊಳಿಸಬೇಕಿರುತ್ತದೆ. ಸ್ವ-ಸಹಾಯ ಗುಂಪು ಕನಿಷ್ಠ ಒಂದು ವರ್ಷದಿಂದ ಕಾರ್ಯ ನಿರ್ವಹಿಸಿತ್ತಿರಬೇಕು ಮತ್ತು ಸ್ವ-ಸಹಾಯ ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಒಂದು ವರ್ಷ ವಾಗಿರಬೇಕು. ಸ್ವ-ಸಹಾಯ ಸಂಘವು ಆರ್ಥಿಕ ಚಟುವಟಿಕೆಗಳಲ್ಲಿ ಲಾಭದಲ್ಲಿರಬೇಕು. ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವ ಫಲಾನುಭವಿಯು ಜಮೀನು ಹೊಂದಿದ್ದಲ್ಲಿ ಅಥವಾ ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಲ್ಲಿ ಅವರಿಗೆ ಸಣ್ಣ ಪ್ರಮಾಣದ ಆರ್ಥಿಕ ಸಾಲ ಯೋಜನೆಯಡಿಯಲ್ಲಿ ಸಾಲ ಮಂಜೂರು ಮಾಡತಕ್ಕದ್ದಲ್ಲ. ಮೈಕ್ರೋ ಕ್ರೆಡಿಟ್ ಹಣಕಾಸು ಯೋಜನೆಯಡಿ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿ ಶೇಕಡ 50 ರಷ್ಟು ಸಹಾಯಧನ, ಗರಿಷ್ಠ ರೂ. 5,000/-ಗಳು ಪ್ರತಿ ಫಲಾನುಭವಿಗೆ ಫಲಾನುಭವಿಯ ಹೆಸರಿನಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲವನ್ನು ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕಿನಲ್ಲಿ ತೆರೆದಿರುವ ಖಾತೆಯ ಸಂಖ್ಯೆ ನಮೂದಿಸಿ ಚೆಕ್ಕುಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಬಹುದಾಗಿದೆ. ಸ್ವ ಸಹಾಯ ಸಂಘಗಳು ಸಾಲವನ್ನು ಫಲಾನುಭವಿಗೆ ಶೇಕಡ 4ರಬಡ್ಡಿ ದರದಲ್ಲಿ ನೀಡಬೇಕು.

ಆಯ್ಕೆ ವಿಧಾನ:-

ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

MU

ಸಬ್ಸಿಡಿಯಾಗಿ ಸಾಲದ ಖಾತಾ ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ತಪ್ಪಿದಲ್ಲಿ ಪೂರ್ಣ ಮೊತ್ತವನ್ನು ಸಾಲವನ್ನಾಗಿ ಪರಿಗಣಿಸಲಾಗುವುದು. ಯೋಜನೆ ಉದ್ದೇಶಕ್ಕಾಗಿ ಗುರ್ತಿಸಲಾದ ಸಾಂಪ್ರದಾಯಿಕ (ಪರಂಪರಾಗತ) ಕುಶಲಕರ್ಮಿಗಳು/ ವೃತ್ತಿ ಕಸುಬುಗಳಿಗೆ ಸಾಲಸೌಲಭ್ಯ ನೀಡಲಾಗುವುದು.

3) **ಸಣ್ಣ (ಮೈಕ್ರೋ) ಸಾಲ ಮತ್ತು ಸಹಾಯಧನ ಯೋಜನೆ:-**

ಈ ಯೋಜನೆಯಡಿಯಲ್ಲಿ ನಗರ ಪ್ರದೇಶದಲ್ಲಿ ಮತ್ತು ಗ್ರಾಮಗಳಲ್ಲಿ ವಾಸವಾಗಿರುವ ಮತೀಯ ಅಲ್ಪಸಂಖ್ಯಾತರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು, ಅಂತಹ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಕುಶಲ ಅಥವಾ ಕುಶಲಯಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಣದ ವ್ಯಾಪಾರವನ್ನು ಮಾಡಲು ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ನಿಗಮದಿಂದ ಫಲಾಪೇಕ್ಷಿಗಳು ಸ್ವ-ಸಹಾಯ ಗುಂಪುಗಳನ್ನು ಇತರೆ ಇಲಾಖೆಗಳ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಘಟನೆ ಮಾಡಿ ಸ್ವ ಸಹಾಯ ಗುಂಪುಗಳ ಮೂಲಕ ಯೋಜನೆಯನ್ನು ಸಿದ್ದಪಡಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸ್ವ-ಸಹಾಯ ಗುಂಪಿನ ಗಾತ್ರ 10 ಜನ ರಿಂದ 20ಜನ ವರೆಗೆಮಾತ್ರ ಮಿತಿಗೊಳಿಸಬೇಕಿರುತ್ತದೆ. ಸ್ವ-ಸಹಾಯ ಗುಂಪು ಕನಿಷ್ಟ ಒಂದು ವರ್ಷದಿಂದ ಕಾರ್ಯ ನಿರ್ವಹಿಸಿತ್ತಿರಬೇಕು ಮತ್ತು ಸ್ವ-ಸಹಾಯ ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಒಂದು ವರ್ಷ ವಾಗಿರಬೇಕು. ಸ್ವ-ಸಹಾಯ ಸಂಘವು ಆರ್ಥಿಕ ಚಟುವಟಿಕೆಗಳಲ್ಲಿ ಲಾಭದಲ್ಲಿರಬೇಕು. ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವ ಫಲಾನುಭವಿಯು ಜಮೀನು ಹೊಂದಿದ್ದಲ್ಲಿ ಅಥವಾ ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಲ್ಲಿ ಅವರಿಗೆ ಸಣ್ಣ ಪ್ರಮಾಣದ ಆರ್ಥಿಕ ಸಾಲ ಯೋಜನೆಯಡಿಯಲ್ಲಿ ಸಾಲ ಮಂಜೂರು ಮಾಡತಕ್ಕದ್ದಲ್ಲ. ಮೈಕ್ರೋ ಕ್ರೆಡಿಟ್ ಹಣಕಾಸು ಯೋಜನೆಯಡಿ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿ ಶೇಕಡ 50 ರಷ್ಟು ಸಹಾಯಧನ, ಗರಿಷ್ಟ ರೂ. 5, 000/-ಗಳು ಪ್ರತಿ ಫಲಾನುಭವಿಗೆ ಫಲಾನುಭವಿಯ ಹೆಸರಿನಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲವನ್ನು ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕಿನಲ್ಲಿ ತೆರೆದಿರುವ ಖಾತೆಯ ಸಂಖ್ಯೆ ನಮೂದಿಸಿ ಚೆಕ್ಕುಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಬಹುದಾಗಿದೆ. ಸ್ವ ಸಹಾಯ ಸಂಘಗಳು ಸಾಲವನ್ನು ಫಲಾನುಭವಿಗೆ ಶೇಕಡ 4ರಬಡ್ಡಿ ದರದಲ್ಲಿ ನೀಡಬೇಕು.

**ಆಯ್ಕೆ ವಿಧಾನ:-**

ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

MU

4. ಮೈಕ್ರೋ ಸಾಲ ಯೋಜನೆ (ವೈಯಕ್ತಿಕ)

ನಿಗಮದ ಯಾವುದೇ ಯೋಜನೆಯಲ್ಲೂ ಇದುವರೆಗೆ ಸಾಲ, ಸಹಾಯಧನ ಯಾವುದನ್ನೂ ಪಡೆಯದ ಕಡುಬಡತನದಲ್ಲಿರುವ ಅಲ್ಪಸಂಖ್ಯಾತ ಸಮುದಾಯದ ಅಂತ್ಯೋದಯ/ಬಿಪಿಎಲ್ ಕಾರ್ಡ್ ಹೊಂದಿರುವ 25 ರಿಂದ 50 ವಯೋಮಾನದೊಳಗಿನ ಮಹಿಳೆಯರಿಗೆ, ತಳ್ಳುವ ಗಾಡಿಯಲ್ಲಿ ವ್ಯಾಪಾರ, ಬೀದಿ ವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ, ಅರಿಷಿನ/ ಕುಂಕುಮ/ ಅಗರಬತ್ತಿ/ಕರ್ಪೂರ, ಪಾದಚಾರಿ ಮಾರ್ಗದಲ್ಲಿ, ಟೀ/ಕಾಪಿ ಮಾರಾಟ, ಎಳನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ. 10, 000/- ಮೊತ್ತದ ( ರೂ. 8000/- ಸಾಲ +ರೂ. 2, 000/- ಸಬ್ಸಿಡಿ) ಅಲ್ಪಾವಧಿ ಸಾಲ ನೀಡಲಾಗುವುದು.

ಸಾಲ ನೀಡಿಕೆ ವಿಧಾನ:

ಮೊದಲನೇ ಹಂತ:

1. ನಿಗಮದ ವೆಬ್ ಸೈಟಿನಲ್ಲಿ ಹೆಸರು, ವಿಳಾಸ, ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಇತ್ಯಾದಿ ಪ್ರಾಥಮಿಕ ವಿವರಗಳನ್ನು ನೀಡಿ ಅಪ್ ಲೋಡ್ ಮಾಡಿದಾಗ ಅರ್ಜಿದಾರರು ನೀಡಿದ ಮೊಬೈಲ್ ಸಂಖ್ಯೆಗೆ ಓಟಿಪಿ ಸಂಖ್ಯೆಯೊಂದು ಬರುತ್ತದೆ. ಅದನ್ನು ಆನ್ ಲೈನಿನಲ್ಲಿ ದಾಖಲಿಸಿದಾಗ ಅರ್ಜಿಯು ನಿಗಮದ ವೆಬ್ ಸೈಟಿನಲ್ಲಿ ರಿಜಿಸ್ಟರ್ ಆಗುತ್ತದೆ. ಆಗ ಅರ್ಜಿದಾರರ ರಿಜಿಸ್ಟರ್ ಸಂಖ್ಯೆ ಮೊಬೈಲಿಗೂ ರವಾನೆಯಾಗುತ್ತದೆ . ನಂತರ ಪುನ: ರಿಜಿಸ್ಟರ್ ನಂಬರ್ ಮೂಲಕ ವೆಬ್ ಸೈಟಿಗೆ ಲಾಗಿನ್ ಆಗಿ, ಬ್ಯಾಂಕ್ ಖಾತೆ, ಆದಾಯ/ಜಾತಿ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳ ಸ್ಕ್ಯಾನ್ ಕಾಪಿಯನ್ನು ಅಪ್ ಲೋಡ್ ಮಾಡಬೇಕು. ಸಾಲದ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಆನ್ ಲೈನಿನಲ್ಲೇ ಭರ್ತಿ ಮಾಡಿ, ಸಂಬಂಧಪಟ್ಟದಾಖಲಾತಿಗಳೊಂದಿಗೆ ಅಪ್ ಲೋಡ್ ಮಾಡಿದ ನಂತರ ಸ್ವೀಕೃತಗೊಂಡ ನಿಮ್ಮ ಆನ್ ಲೈನ್ ಅರ್ಜಿಯ ಎರಡು ಪ್ರತಿಗಳನ್ನು ಪ್ರಿಂಟ್ ಮಾಡಿ ಇಟ್ಟುಕೊಳ್ಳಬೇಕು.

ಅ). ಅರ್ಜಿಸಲ್ಲಿಸುವಾಗ ನೀಡಬೇಕಾದ ದಾಖಲಾತಿಗಳು

1. ಸರಳ ಅರ್ಜಿ ನಮೂನೆ (ಆನ್ ಲೈನಿನಲ್ಲೆ ನೀಡಲಾಗಿದೆ)
2. ಆಧಾರ್ ಕಾರ್ಡ್ ಪ್ರತಿ
3. ಬಿಪಿಎಲ್ ಕಾರ್ಡ್/ಅಂತ್ಯೋದಯ ಕಾರ್ಡ್ ಪ್ರತಿ
4. ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ (ಹೆಸರು, ಖಾತೆ ಸಂಖ್ಯೆ, ಫೋಟೋ, ಬ್ಯಾಂಕಿನ ವ್ಯವಸ್ಥಾಪಕರ ಸಹಿ ಇರುವ ಪುಟ ಮತ್ತು ಇತ್ತೀಚಿನ ಎರಡು ತಿಂಗಳ ವ್ಯವಹಾರ, ಶಿಲ್ಕು ತೋರಿಸುವ ಪುಟಗಳ ಜೆರಾಕ್ಸ್)
5. ಜಾತಿ/ಆದಾಯ ಪ್ರಮಾಣ ಪತ್ರ
6. ವಿಧವೆಯರು: ಪಿಂಚಣಿ ದಾಖಲೆ ಅಥವಾ ಗಂಡನ ಮರಣ ಪ್ರಮಾಣ ಪತ್ರ

(6)

7. ವಿಕಲ ಚೇತನರು: ಅಧಿಕೃತ ಅಂಗವೈಕಲ್ಯ ಪ್ರಮಾಣ ಪತ್ರ.

ಆ). ಅರ್ಜಿ ಸಲ್ಲಿಕೆ ಮತ್ತು ಮಂಜೂರಾತಿ ಪ್ರಕ್ರಿಯೆ:

ಆನ್ ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು, ನಿಗಮವು ನಿರ್ಧರಿಸಿದ ಮಾನದಂಡಗಳ ಆಧಾರದಲ್ಲಿ, ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

ಎರಡನೇ ಹಂತ:

1. ಹೀಗೆ ಆಯ್ಕೆಯಾದ ಫಲಾನುಭವಿಗಳಿಗೆ ಮೊಬೈಲ್ ಮೂಲಕ ಆಯ್ಕೆಯಾಗಿರುವ ಬಗ್ಗೆ ಸಂದೇಶ ಕಳುಹಿಸಲಾಗುತ್ತದೆ. ಫಲಾನುಭವಿಗಳು ಈಗಾಗಲೇ ತಮಗೆ ನೀಡಿದ ರಿಜಿಸ್ಟರ್ ನಂಬರ್ ಮೂಲಕ ಲಾಗಿನ್ ಆಗಿ ಆನ್ ಲೈನಿನಿಂದ ಸಾಲದ ದಾಖಲೆ ಪತ್ರಗಳನ್ನು ಮಾತ್ರ ಡೌನ್ ಲೋಡ್ ಮಾಡಿಕೊಂಡು, ಭರ್ತಿ ಮಾಡಿ ಸಹಿ ಹಾಕಿದ ದಾಖಲೆ ಪತ್ರಗಳನ್ನು ಸ್ಕಾನ್ ಮಾಡಿ ಮತ್ತೆ ಅಪಲೋಡ್ ಮಾಡಬೇಕು.

2. ಆನ್ ಲೈನಿನಲ್ಲಿ ಅಪಲೋಡ್ ಮಾಡಿದ ನಂತರ, ಸಹಿ ಹಾಕಿಟ್ಟುಕೊಂಡ . ಸಾಲ ಮಂಜೂರಾತಿ ಪತ್ರ ಹಾಗೂ ತಗಾದೆಪತ್ರ, ಹಿಂದೆ ಸಲ್ಲಿಸಿದ ಸಾಲದ ಅರ್ಜಿ ಮತ್ತು ನೀಡಿರುವ ಕೆವೈಸಿ ದಾಖಲೆಗಳ ಪ್ರತಿಗಳೊಂದಿಗೆ, ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಸಲ್ಲಿಸಬೇಕು.

ಮೂರನೇ ಹಂತ:

ಸಾಲ ಅನುಮೋದನೆಯ ನಂತರ ಕೇಂದ್ರ ಕಛೇರಿಯಿಂದ ಕೂಡಲೇ ಸಾಲದ ಮೊತ್ತವನ್ನು ನೆಫ್ಟ್ ಮೂಲಕ ಪ್ರತಿಯೋರ್ವ ಆಯ್ಕೆಯಾದ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುವುದು.

ಸಾಲ ಬಿಡುಗಡೆಯ ನಂತರ:

ಮೈಕ್ರೋ ಸಾಲದ ಮೊರೆಟೋರಿಯಂ ಅವಧಿ 2 ತಿಂಗಳು ಮಾತ್ರ. ಸಬ್ಸಿಡಿ ಮೊತ್ತ ರೂ. 2000/- ಬಿಟ್ಟು, ರೂ. 8000/- ಸಾಲದ ಮೊತ್ತವನ್ನು ಶೇಕಡ 4ರ ಬಡ್ಡಿಯೊಂದಿಗೆ 10 ಸಮಾನ ಮಾಸಿಕ ಕಂತುಗಳಲ್ಲಿ, ರೂ. 820/-ರಂತೇ ಮರುಪಾವತಿ ಮಾಡತಕ್ಕದ್ದು.

5). **ಆಟೋರಿಕ್ಷಾ/ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಗಾಗಿ ಸಹಾಯಧನ:-**

2021-22 ನೇ ಸಾಲಿಗೆ ವಿವಿಧ ಬ್ಯಾಂಕುಗಳ ಮೂಲಕ ಟ್ಯಾಕ್ಸಿ/ಗೂಡ್ಸ್ ವಾಹನವನ್ನು ಖರೀದಿಸಲು ಉದ್ದೇಶಿಸಿರುವ ಫಲಾನುಭವಿಗಳಿಗೆ ಗರಿಷ್ಠ ರೂ. 75000 ಸಹಾಯಧನ ನೀಡಲಾಗುವುದು.

ಆಯ್ಕೆ ವಿಧಾನ:-

ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

(ii) **ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲೆ ಕಛೇರಿಯಲ್ಲಿ ಅಧಿಕಾರಿಗಳ/ನೌಕರರ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು- ಅನುಬಂಧ-ಅ ರಲ್ಲಿ ಮಂಡಿಸಿದೆ.**

ನಿಗಮದ ಜಿಲ್ಲಾ ಕಛೇರಿಯ ಅಧಿಕಾರಿಗಳ/ನೌಕರರ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಮಟ್ಟದ ಅಧಿಕಾರಿ/ಸಿಬ್ಬಂದಿ ಸಾಮಥ್ರ್ಯದ ಚಾರ್ಟ್ ವಿವರ ಈ ಕೆಳಕಂಡಂತಿದೆ.

**ಜಿಲ್ಲಾ ಮಟ್ಟದ ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳು:**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಆಯಾ ಜಿಲ್ಲಾ ಕಛೇರಿಯ ಪೂರ್ಣ ಆಡಳಿತ ನಿರ್ವಹಣೆ, ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆ, ಬ್ಯಾಂಕ್/ಹಣಕಾಸು ಸಂಸ್ಥೆಗಳೊಡನೆ ವ್ಯವಹಾರ, ಪ್ರಕಟಣೆ ನೀಡುವುದು, ಅರ್ಜಿ ಪಡೆದು ಜಿಲ್ಲಾ ಸಮಿತಿ ಅನುಮೋದನೆ ಪಡೆದು ಗುರಿಯನ್ವಯ ಸಾಲ ಸೌಲಭ್ಯಗಳನ್ನು ವಿತರಿಸಿ, ಲೆಕ್ಕ ಪತ್ರ, ಇತ್ಯಾದಿ ಕಾರ್ಯಗಳನ್ನು ನಿರ್ವಹಣೆ ಮಾಡುವ ಅಧಿಕಾರ ನೀಡಲಾಗಿದೆ.

**ಜಿಲ್ಲಾ ವ್ಯವಸ್ಥಾಪಕರುಗಳ ಕರ್ತವ್ಯಗಳು:**

1. ಜಿಲ್ಲಾ ಕಛೇರಿಯ ಸಂಪೂರ್ಣ ಆಡಳಿತ ನಿರ್ವಹಣೆ, ಗುರಿ ಅನ್ವಯ ಎಲ್ಲಾ ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆಯ ಜವಾಬ್ದಾರಿ. ಮತ್ತು ಸಾಲ ವಸೂಲಾತಿಗೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

2. ಅಗತ್ಯ ಸಭೆಗಳಿಗೆ ಹಾಜರಾಗುವುದು, ಯೋಜನೆಗಳ ಬಗ್ಗೆ ಜನ ಪ್ರತಿನಿಧಿಗಳಿಗೆ ಮಾಹಿತಿ ನೀಡುವುದು.
3. ವಿವಿಧ ಇಲಾಖೆಗಳು, ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಯೋಜನೆಯ ಅನುಷ್ಠಾನಕ್ಕಾಗಿ ಸಮನ್ವಯಾಧಿಕಾರಿಯಾಗಿ ಕೆಲಸ ನಿರ್ವಹಿಸುವುದು.

4. ಸರ್ಕಾರದ ವಿವಿಧ ಆದೇಶಗಳಲ್ಲಿ ಮತ್ತು ನಿಗಮದ ಆದೇಶ, ಪತ್ರ ಮತ್ತು ಸುತ್ತೋಲೆಗಳಲ್ಲಿ ವಹಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದು.

(8)

5. ತಿಂಗಳಿಗೆ ಕನಿಷ್ಠ 10 ದಿನಗಳ ಪ್ರವಾಸ ಮಾಡಿ, ಸಾಲ ವಸೂಲಾತಿ ಮತ್ತು ಘಟಕ ತಪಾಸಣೆ ಮಾಡುವುದು. ಸಂಧರ್ಭಾನುಸಾರ ವಿವಿಧ ತಾಲ್ಲೂಕು ಹೋಬಳಿ ಕೇಂದ್ರಗಳಲ್ಲಿ ವಾಸ್ತವ್ಯ ಮಾಡುವುದು.

6. ಜಿಲ್ಲೆಯಲ್ಲಿ ಆಡಳಿತಾತ್ಮಕ ಮುಖ್ಯಸ್ಥರಾಗಿರುವ ಜಿಲ್ಲಾ ವ್ಯವಸ್ಥಾಪಕರು ಜಿಲ್ಲೆಯಲ್ಲಿನ ಎಲ್ಲಾ ಆಗು-ಹೋಗುಗಳಿಗೆ ಜವಾಬ್ದಾರರಾಗಿರುತ್ತಾರೆ.

7. ನಿಗಮಕ್ಕೆ ಸಂಬಂಧಿಸಿದಂತೆ Per Financial Code ಹಣಕಾಸಿನ ನಿರ್ವಹಣೆ ವೆಚ್ಚದ ಬಗ್ಗೆ ಆಗಿಂದಾಗ್ಗೆ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಆದೇಶ, ಸುತ್ತೋಲೆ, ಮತ್ತು ಮಾರ್ಗದರ್ಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

8. ನಿಗಮದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಹಿಸಿದ ಇತರೆ ಕಛೇರಿ ಕರ್ತವ್ಯಗಳನ್ನು ನಿರ್ವಹಿಸುವುದು.

(iii) **ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗಗಳು ಸೇರಿದಂತೆ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು:**

ಅಲ್ಪಸಂಖ್ಯಾತ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮವನ್ನು ರೂಪಿಸಿ ನಿರ್ದೇಶಕ ಮಂಡಳಿ/ಸರ್ಕಾರದ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ಅನುಷ್ಠಾನದಲ್ಲಿನ ವಿಧಿ ವಿಧಾನಗಳ ಬಗ್ಗೆ ಸೂಕ್ತ ಆದೇಶ, ಸುತ್ತೋಲೆ ನೀಡಲಾಗುತ್ತದೆ. ಸಾಲಕ್ಕೆ ದಸ್ತಾವೇಜುಗಳನ್ನು ಮತ್ತು ನಿರ್ವಹಿಸಬೇಕಾದ ಲೆಕ್ಕಪತ್ರಗಳನ್ನು ಮತ್ತು ಅಧಿಕಾರಿಯ ಹೊಣೆಗಾರಿಕೆಯನ್ನು ತಿಳಿಸಲಾಗುತ್ತದೆ. ನಿಗಮದ ಕಾರ್ಯನಿರ್ವಹಣೆಯ ವಿಧಿ, ವಿಧಾನಗಳನ್ನು ಪ್ರಗತಿಯನ್ನು ಕೇಂದ್ರ ಕಛೇರಿ ಹಂತದಲ್ಲಿ ಹಾಗೂ ಅಲ್ಪಸಂಖ್ಯಾತ ಆಯೋಗವು ಸಹ ಸಮೀಕ್ಷಿಸಿ ಸೂಕ್ತ ಸೂಚನೆ/ನಿರ್ದೇಶನಗಳನ್ನು ನೀಡುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಉಸ್ತುವಾರಿ ಸಚಿವರು ವಿವಿಧ ಸಮಿತಿಗಳು ಮೇಲುಸ್ತುವಾರಿ ಕಾರ್ಯಗಳನ್ನು ಸಮೀಕ್ಷಾ ಕಾರ್ಯಗಳನ್ನು ನಿರ್ವಹಣೆ ಮಾಡುತ್ತವೆ.

(iv) **ಸಂಸ್ಥೆಯ ಕಾರ್ಯನಿರ್ವಹಣೆಗೆ ರೂಪಿಸಿರುವ ಸೂತ್ರಗಳು ಮತ್ತು ಅನುಸರಿಸಲಾಗುವ ನಿಯಮಾವಳಿಗಳು, ನಿರ್ದೇಶನಗಳು/ ಅನುಸೂಚಿಗಳು;**

ಸರ್ಕಾರವು ಆಯಾ ವರ್ಷಗಳಲ್ಲಿ ನೀಡುವ ಷೇರು ಬಂಡವಾಳ, ಅನುದಾನಗಳ ಹಣವನ್ನು ಅವಲಂಬಿಸಿ ಜಿಲ್ಲೆಯ ಜನ ಸಂಖ್ಯೆಯನ್ನಾಧರಿಸಿ ಜಿಲ್ಲಾವಾರು ಭೌತಿಕ ಗುರಿಗಳನ್ನು ನಿಗಮದ ಕೇಂದ್ರ ಕಛೇರಿಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ರೂಪಿಸಲಾಗುವುದು. ಅದರಂತೆ ನಿಗಮದ ಕೇಂದ್ರ ಕಛೇರಿಯಿಂದ ನೀಡಿರುವ ಗುರಿಯನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಲೀಡ್‌ಬ್ಯಾಂಕ್ ಮೂಲಕ

MJ

ಶಾಖಾವಾರು ಗುರಿಯನ್ನು ನಿಗದಿಪಡಿಸಲಾಗುತ್ತದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಯಲ್ಲಿ ಗುರಿ ಮತ್ತು ಅನುಸರಿಸಬೇಕಾದ ವಿಧಾನದ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ನಿಗಮವು ಕ್ರಮ ವಹಿಸಿರುತ್ತದೆ.

(v) ಸಂಸ್ಥೆಯು ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ವಿವರಗಳು:-

ನಿಗಮವು ಕಂಪನಿ ಕಾಯ್ದೆ ಅನ್ವಯ ನಿರ್ವಹಣೆ ಮಾಡಬೇಕಾದ ರಿಜಿಸ್ಟರ್‌ಗಳನ್ನು ಮ್ಯಾನ್ಯುಯಲ್‌ಗಳನ್ನು, ಸರ್ಟಿಫಿಕೇಟ್‌ಗಳನ್ನು, ಪ್ರಪತ್ರಗಳನ್ನು ಹಾಗೂ ಸರ್ಕಾರದದಿಂದ ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ವಯ ನಿರ್ವಹಣೆ ಮಾಡಲಾಗುತ್ತದೆ. ಹಾಲಿ ಇರುವ ಪ್ರಮುಖ ದಾಖಲೆಗಳು ಈ ಕೆಳಕಂಡಂತೆ ಇವೆ.

ನಿಗಮವು ಅನುಷ್ಠಾಗೊಳಿಸುತ್ತಿರುವ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ, ಸಾಲ ಮಂಜೂರಾತಿಗೆ ಅರ್ಜಿದಾರರು ವೆಬ್‌ಪೇಜ್ ಮೂಲಕ ಆನ್‌ಲೈನ್ ಮಾಡಿ ನಂತರ ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಕಛೇರಿಗೆ ಸಲ್ಲಿಸಬೇಕು ಮತ್ತು ವಿವರ ಈ ಮುಂದಿನಂತಿದೆ.

Scheme-wise Loan Documentation Chart

| Sl. No. | Scheme | Annexure Number | By Whom? |
|---|---|---|---|
| 1 | Arivu (Education) Loan Scheme | | |
| (a) | Indemnity Bond | 1 | By the Borrower & Parents |
| 2 | Shramasakthi Loan Scheme | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Letter of Guarantee | VIII | In case of Guarantor |
| 3 | Micro Loan Scheme | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |

| | | | |
|---|---|---|---|
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |
| 4 | Taxi/Goods Scheme | | |
| (a) | Utilisation of Subsidy | I | By Bank |
| (b) | Memorandum of Agreement | II | By the Borrower |
| 5 | Micro loan For (Individual) Scheme | | |
| (a) | Security of Agreement | I | By the Borrower |

(vi) ಸಂಸ್ಥೆಯ ನೀತಿ ನಿರೂಪಣೆ ಮತ್ತು ಸಂಸ್ಥೆಯ ಯೋಜನೆಗಳ ಅನುಷ್ಠಾನ ಸಂಬಂಧದಲ್ಲಿ ಸಾರ್ವಜನಿಕರು/ ಪ್ರತಿನಿಧಿಗಳೊಂದಿಗೆ ಸಮನ್ವಯತೆಯ ವಿವರಗಳು.

ನಿಗಮದ ಯೋಜನೆಗಳ ಅನುಷ್ಠಾನ ಮತ್ತು ನೀತಿ ನಿರೂಪಣೆಯಲ್ಲಿನ ನ್ಯೂನ್ಯತೆಗಳನ್ನು ತಿಳಿಯಲು ನಿಗಮವು ಈ ಕೆಳಕಂಡ ಕ್ರಮಗಳನ್ನು ಅಲ್ಪಸಂಖಾತರ ವರ್ಗಗಳ ಜನರ ಸಮನ್ವಯದೊಂದಿಗೆ ಕ್ರಮವಹಿಸಿದೆ.

1. ಅಲ್ಪಸಂಖಾತರ ಒಕ್ಕೂಟ ಹಾಗೂ ಸಂಘ ಸಂಸ್ಥೆಗಳ ಮುಖಂಡರು ಆಯಾ ಪ್ರದೇಶದಲ್ಲಿ ಅಲ್ಪಸಂಖ್ಯಾತ ವರ್ಗಗಳ ಜನರಿಗೆ ಅಗತ್ಯವಿರುವ ಆರ್ಥಿಕ ಚಟುವಟಿಕೆಗಳ ಬೇಡಿಕೆಯಿರುವ ಬಗ್ಗೆ ನಿಗಮದ ಯೋಜನೆಗಳ ಅನುಷ್ಠಾನದಲ್ಲಿರುವ ನ್ಯೂನ್ಯತೆಗಳನ್ನು ಪರಿಷ್ಕರಿಸುವುದು ಅಲ್ಪಸಂಖ್ಯಾತರ ವರ್ಗಗಳ ಮುಖಂಡರುಗಳ ಸಭೆಯನ್ನು ಆಗಾಗ್ಗೆ ಏರ್ಪಡಿಸಲಾಗುತ್ತದೆ.
2. ಸಂವಾದ ನಿಗಮದ ಯೋಜನೆಗಳ ಬಗ್ಗೆ ಅರಿವು ಹಾಗೂ ಅನುಷ್ಠಾನದಲ್ಲಿನ ನ್ಯೂನ್ಯತೆ ಮತ್ತು ಕೊರತೆಗಳನ್ನು ತಿಳಿಯಲು ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ "ಸಂವಾದ" ಕಾರ್ಯಕ್ರಮಗಳನ್ನು ಮತ್ತು ಕುಂದು ಕೊರತೆ ನಿವಾರಣಾ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ಹಮ್ಮಿಕೊಳ್ಳಬೇಕು.
3. ಸಾಲ ವಿತರಣಾ ಪೂರ್ವ ಸಮಾಲೋಚನೆ: ಸಾಲ ಪಡೆಯಲು ಪೂರ್ಣ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡಲು, ಸಾಲ ಮತ್ತು ಸಬ್ಸಿಡಿಯ ಮಹತ್ವವನ್ನು ತಿಳಿಯಲು ಸಾಲ ಸದುಪಯೋಗದ ಬಗ್ಗೆ ತಿಳಿಸಲು ಅವರ ಸಾಲಕ್ಕೆ ಮಾರುಕಟ್ಟೆ ವ್ಯವಸ್ಥೆಯನ್ನು ತಿಳಿಸಲು ಕಡ್ಡಾಯವಾಗಿ ಸಾಲ ವಿತರಣಾಪೂರ್ವ ಸಮಾಲೋಚನೆಯನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕು.
4. ಸಾಲ ವಿತರಣೋತ್ತರ ಪರ್ಯಾಲೋಚನೆ: ಸಾಲ ದುರುಪಯೋಗವಾಗುವುದನ್ನು ತಡೆಗಟ್ಟಲು ಯೋಜನೆಯ ಅನುಷ್ಠಾನ ಮತ್ತು ಘಟಕ ಸ್ಥಾಪನೆಯ ಬಗ್ಗೆ ನ್ಯೂನ್ಯತೆ ಮತ್ತು ಕೊರತೆಗಳ ಬಗ್ಗೆ ತಿಳಿಯಲು ಸಾಲ ಪಡೆದ ಫಲಾನುಭವಿಗಳೊಂದಿಗೆ ಪರ್ಯಾಲೋಚನಾ ಸಭೆಗಳನ್ನು ನಡೆಸುವುದು

MI

ಮತ್ತು ಘಟಕಗಳನ್ನು ತಪಾಸಿಸಿ ಸೂಕ್ತ ತಿಳುವಳಿಕೆಯನ್ನು ಫಲಾನುಭವಿಗಳಿಗೆ ನೀಡುವ ಕ್ರಮ ಕೈಗೊಳ್ಳಲಾಗಿದೆ.

5. ಸಾಮಥ್ಯ್ರವರ್ಧನಾ ಕಾರ್ಯಗಾರ: ನಿಗಮದ ಅಧಕಾರಿ/ನೌಕರರಿಗೆ ಹೆಚ್ಚು ಉತ್ತೇಜನ ನೀಡಿ ಅವರನ್ನು ಕ್ರಿಯಾಶೀಲರಾಗಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅಗತ್ಯವಿರುವ ತರಬೇತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.
6. ಪ್ರಚಾರ: ಪತ್ರಿಕೆಗಳು, ಕರ ಪತ್ರಗಳು, ಭಿತ್ತಿ ಪತ್ರಗಳು, ಕೈಪಿಡಿಗಳ ಮೂಲಕ ಪ್ರಚಾರಂದೋಲನಾ ಕಾರ್ಯವನ್ನು ಹಮ್ಮಿಕೊಂಡು ಪ್ರಚಾರ ಮಾಡಲಾಗುತ್ತಿದೆ.
7. ಸಾಮಾಜಿಕ ಆರ್ಥಿಕ ಸಬಲೀಕರಣ:
8. ಸ್ವಯಂ ಉದ್ಯೋಗ, ನೀರಾವರಿ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲೀಕರಣಕ್ಕೆ ಅಗತ್ಯವಾದ ಆದಾಯ ತರುವಂತಹ ಚಟುವಟಿಕೆಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.
9. ಅಲ್ಪಸಂಖ್ಯಾತ ವರ್ಗಗಳ ಜನರು ಸ್ವ-ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಸಾಲಸೌಲಭ್ಯಗಳನ್ನು ನೀಡಲಾಗುತ್ತಿದೆ.
10. ವಿಧವೆಯರು/ಪರಿತ್ಯಕ್ತರು/ಅಂಗವಿಕಲರಿಗೆ ಪ್ರಥಮ ಆದ್ಯತೆ ನೀಡಲಾಗುತ್ತಿದೆ.

**(vii) ಸಂಸ್ಥೆಯ ಉದ್ದೇಶಗಳನ್ನು ಈಡೇರಿಸಲು 2 ಅಥವಾ ಅದಕ್ಕಿಂತ ಹೆಚ್ಚು ಸದಸ್ಯರಿಂದ ರಚಿಸಲ್ಪಟ್ಟ ಸಮಿತಿ, ಪರತ್ತು, ಮಂಡಳಿಗಳು ಮತ್ತು ಅದರ ಹೇಳಿಕೆಗಳು ಹಾಗೂ ಆ ಪರಿಷತ್ತು , ಮಂಡಳಿ, ಸಮಿತಿಯ ಸದಸ್ಯರು ನಡೆಸಿದ ಸಭೆಯ ನಡವಳಿಗಳು/ನಿರ್ಣಯಗಳು ಸಾರ್ವಜನಿಕರಿಗಾಗಿ ಲಭ್ಯತೆಯ ಮಾಹಿತಿ.**

1. ಸರ್ಕಾರವು ಕಂಪನಿ ಕಾಯ್ದೆ ಅನ್ವಯ ನಿಗಮವನ್ನು ಸ್ಥಾಪಿಸಿರುತ್ತದೆ. ನಿಗಮದ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರಕಾರ ನಿರ್ದೇಶಕ ಮಂಡಳಿಯನ್ನು ರಚಿಸಿರುತ್ತದೆ. ಮಂಡಳಿಯು ಕೈಗೊಳ್ಳುವ ನಿರ್ಣಯಗಳನ್ನು ಕೆಳಗಿನ ಹಂತಕ್ಕೆ ತಿಳಿಸಲು ಸುತ್ತೋಲೆ ಆದೇಶಗಳನ್ನು ಹೊರಡಿಸಲಾಗುತ್ತದೆ. ಇವುಗಳನ್ನು ಸಾರ್ವಜನಿಕರಿಗೆ ಕೈಪಿಡಿಯಲ್ಲಿ ಇಲ್ಲವೆ, ನೋಟಿಸ್ ಬೋರ್ಡ್‌ಗಳಲ್ಲಿ ಪ್ರಕಟಿಸಲಾಗುತ್ತದೆ. ವಾರ್ಷಿಕ ಲೆಕ್ಕ ತಪಾಸಣಾ ವರದಿಗಳು ಸಹ ಸಾರ್ವಜನಿಕರ ಅವಗಾಹನೆಗೆ ಲಭ್ಯವಿರುತ್ತದೆ.

2. ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ ಸಾಲ ಯೋಜನೆ ಮತ್ತು ಮೈಕ್ರೋ ಸಾಲ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯಲ್ಲಿ ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ ಸದಸ್ಯರು, ಸಂಬಂಧಿಸಿದ ತಾಲ್ಲೂಕು ತಹಸೀಲ್ದಾರರು, ನಿಗಮದ ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಅಭಿವೃದ್ಧಿ ಅಧಿಕಾರಿ/ಸಹಾಯಕ ಅಭಿವೃದ್ಧಿ ಅಧಿಕಾರಿಗಳು ಸಹಾಯಕರಾಗಿ ಎಲ್ಲಾ

ಕಾರ್ಯಗಳನ್ನು ನಿರ್ವಹಿಸುವರು. ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುತ್ತದೆ. ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಆದೇಶ ಪತ್ರಗಳನ್ನು ಕಳುಹಿಸಲಾಗುವುದು.

3. ನಿಗಮವು ಅನುಷ್ಠಾನಗೊಳಿಸುತ್ತಿರುವ ಅರಿವು ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪ್ರಧಾನ ವ್ಯವಸ್ಥಾಫಕರು, ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸಹಕರ ಸಂಘಗಳ ಉಪ ನಿಬಂಧಕರು ಮತ್ತು ಜನರಲ್ ಮ್ಯಾನೇಜರ್(ಸೂಪರಿಂಟೆಂಟೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ ಯವರುಗಳು ಸದಸ್ಯರಾಗಿರುತ್ತಾರೆ. ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಅಭಿವೃದ್ಧಿ ಅಧಿಕಾರಿ/ಅಭಿವೃದ್ಧಿ ಪರಿವೀಕ್ಷಕರು ಎಲ್ಲಾ ಕಛೇರಿ ಕಾರ್ಯಗಳನ್ನು ನಿರ್ವಹಿಸುವರು. ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುತ್ತದೆ. ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಆದೇಶ ಪತ್ರಗಳನ್ನು ಕಳುಹಿಸಲಾಗುವುದು.

4. ನಿಗಮವು ಅನುಷ್ಠಾನಗೊಳಿಸುತ್ತಿರುವ ಟ್ಯಾಕ್ಸಿ/ಗೂಡ್ಸ್/ಪ್ಯಾಸೆಂಜರ್ ಆಟೋ ವಾಹನ ಯೋಜನೆಯನ್ನು ಅನುಷ್ಠಾನಗೊಳಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಜಿಲ್ಲಾ ಅಧಿಕಾರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಸದಸ್ಯರುತ್ತಾರೆ. ನಿಗಮದ ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಅಭಿವೃದ್ಧಿ ಅಧಿಕಾರಿ/ಅಭಿವೃದ್ಧಿ ಪರಿವೀಕ್ಷಕರು ಸಹಾಯಕರಾಗಿ ಎಲ್ಲಾ ಕಛೇರಿ ಕಾರ್ಯಗಳನ್ನು ನಿರ್ವಹಿಸುವರು. ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುತ್ತದೆ. ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಆದೇಶ ಪತ್ರಗಳನ್ನು ಕಳುಹಿಸಲಾಗುವುದು.

(viii) **ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ದೂರವಾಣಿ ವಿವರಗಳು:**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧಿಕೃತ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ ಹಾಗೂ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ ಈ ಮುಂದಿನಂತೆ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿದೆ.

**ಸಂಸ್ಥೆಯ ವಿಳಾಸ:** ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ
ಕೊಠಡಿ ಸಂಖ್ಯೆ-ಎಸ್.ಎಫ್.-2, , 2ನೇ ಮಹಡಿ,
ಹಮೀದ್ ಶಾ ಕಾಂಪ್ಲೆಕ್ಸ್, ಹಲಸೂರುಗೇಟ್ ಪೋಲೀಸ್ ಸ್ಟೇಷನ್ ಹಿಂಭಾಗ,
ಕಬ್ಬನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-560002

**ದೂರವಾಣಿ ಸಂಖ್ಯೆ:** 080-22114817 ಮತ್ತು 8277944205.

**ಅಧಿಕಾರಿಯ ಹೆಸರು ಮತ್ತು ದೂರವಾಣಿ ಸಂಖ್ಯೆ:** ಮಹ್ಮದ್ ಅಲೀಮುಲ್ಲಾ 080-22114817, 8277944205

ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ವೆಬ್‌ಸೈಟ್ ವಿವರಗಳು:

ನಿಗಮದ ಎಲ್ಲಾ ಯೋಜನೆಗಳಿಗೆ : **kmdconline.karnataka.gov.in**,

ಇ-ಮೇಲ್: kmdc.south@gmail.com

Website: www.kmdc.karnataka.gov.in

(ix) ಸಬ್ಸಿಡಿ ಕಾರ್ಯಕ್ರಮಗಳ ಅನುಷ್ಠಾನ ವಿಧಾನಗಳು, ಈ ಲೆಕ್ಕ ಶೀರ್ಷಿಕೆಯಲ್ಲಿ ಹಂಚಿಕೆ ಮಾಡಿದ ಹಣ ಮತ್ತು ಫಲಾನುಭವಿಗಳ ವಿವರ.

ನಿಗಮಕ್ಕೆ ಆಯವ್ಯಯದಲ್ಲಿ ಸರ್ಕಾರವು ಒದಗಿಸುವ ಹಣದಿಂದ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ ಮಂಡಳಿಯ ಅನುಮೋದನೆಯೊಂದಿಗೆ ಜಿಲ್ಲಾ ವ್ಯವಸ್ಥಾಪಕರಿಗೆ ಕಳುಹಿಸಿಕೊಟ್ಟಿರುವ ಗುರಿಯನ್ನು. ನಿಗಮಕ್ಕೆ ಜಿಲ್ಲಾ ವಲಯದಲ್ಲಿ ಪ್ಲಾನ್ ಪ್ರೋಗ್ರಾಂನಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.

(ಪ್ರತಿ ಅನುಬಂಧ-ಆ ರಲ್ಲಿ ಲಗತ್ತಿಸಿದೆ)

(x) ಸಬ್ಸಿಡಿ ಕಾರ್ಯಕ್ರಮಗಳ ಅನುಷ್ಠಾನ ವಿಧಾನಗಳು, ಈ ಲೆಕ್ಕ ಶೀರ್ಷಿಕೆಯಲ್ಲಿ ಹಂಚಿಕೆ ಮಾಡಿದ ಹಣ ಮತ್ತು ಫಲಾನುಭವಿಗಳ ವಿವರ.

ಅರಿವು ಯೋಜನೆ:-

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯನ್ನು 2021-22ನೇ ಸಾಲಿಗೆ ಅನ್ವಯವಾಗುವಂತೆ ಪರಿಷ್ಕತ ಸರ್ಕಾರಿ ಆದೇಶ ಹೊರಡಿಸಿದ್ದು ಇದರನ್ವಯ ಹೊಸ (ಫ್ರೇಶ್) ಪ್ರಕರಣಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವಿದ್ಯಾರ್ಥಿಗಳ ಹೊರತಾಗಿ ಬೇರೆ ಯಾವ ಕೋರ್ಸುಗಳಿಗೂ ಸಾಲವನ್ನು ನೀಡಲಾಗುವುದಿಲ್ಲ. ರಿನ್ಯೂವಲ್ ಪ್ರಕರಣಗಳಲ್ಲಿ ಸರ್ಕಾರಿ ಆದೇಶವನ್ನು ಪರಿಷ್ಕರಿಸಿ ಕಾರ್ಯಗತಗೊಳಿಸಲಾಗುವುದು.

2. **ಶ್ರಮಶಕ್ತಿ ಯೋಜನೆ**:-

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕುಲಕಸುಬುದಾರರಿಗೆ ಸಾಲಸೌಲಭ್ಯ ನೀಡಲಾಗುತ್ತದೆ.
- ಸದರಿ ಯೋಜನೆಯಲ್ಲಿ ತಲಾ ರೂ. 50000/-ಗಳವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗುತ್ತದೆ. ಇದರಲ್ಲಿ ಶೇ. 50ರಷ್ಟು ಸಾಲವನ್ನು 36 ಕಂತುಗಳಲ್ಲಿ ಫಲಾನುಭವಿಯು ಮರುಪಾವತಿ ಮಾಡಿದಲ್ಲಿ ಉಳಿದ ಶೇ. 50ರಷ್ಟು ಹಣವನ್ನು ಬ್ಯಾಕ್‌ಎಂಡ್ ಸಹಾಯಧನವನ್ನಾಗಿ ಪರಿಗಣಿಸಲಾಗುತ್ತದೆ. ಫಲಾನುಭವಿಯು 36 ಕಂತುಗಳಲ್ಲಿ ಮರುಪಾವತಿ ಮಾಡಲು ವಿಫಲನಾದಲ್ಲಿ ಶೇ. 50ರಷ್ಟು ಬ್ಯಾಕ್‌ಎಂಡ್ ಸಹಾಯಧನವನ್ನು ಸಹ ಸಾಲವೆಂದು ಪರಿಗಣೀಸಲಾಗುತ್ತದೆ.
- ಆರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ. 4ರಷ್ಟು ಬಡ್ಡಿ ವಿಧಿಸಲಾಗುವುದು.

3. **ಸಣ್ಣ (ಮೈಕ್ರೋ) ಸಾಲ (ಗುಂಪು ಸಾಲ) ಹಾಗೂ ಸಹಾಯಧನ ಯೋಜನೆ**:-

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಸ್ವ-ಸಹಾಯ ಗುಂಪಿನ ಮೂಲಕ ಅನುಷ್ಠಾನಗೊಳಿಸಿ ಸಾಲಸೌಲಭ್ಯ ನೀಡಲಾಗುತ್ತದೆ.
- ಸದರಿ ಯೋಜನೆಯಡಿಯಲ್ಲಿ ತಲಾ 5,000-00 ಸಾಲ, 5,000-00 ಸಹಾಯಧನ ನೀಡಲಾಗುವುದು.
- ಆರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.

MJ

(15)

4. **ಮೈಕ್ರೋ ಸಾಲ ಯೋಜನೆ (ವೈಯುಕ್ತಿಕ) ಮಹಿಳೆಯರಿಗೆ ಮಾತ್ರ**

ನಿಗಮದ ಯಾವುದೇ ಯೋಜನೆಯಲ್ಲೂ ಇದುವರೆಗೆ ಸಾಲ, ಸಹಾಯಧನ ಯಾವುದನ್ನೂ ಪಡೆಯದ ಕಡುಬಡತನದಲ್ಲಿರುವ ಅಲ್ಪಸಂಖ್ಯಾತ ಸಮುದಾಯದ ಬಿಪಿಎಲ್ ಕಾರ್ಡ್ ಹೊಂದಿರುವ 25 ರಿಂದ 50 ವಯೋಮಾನದೊಳಗಿನ ಮಹಿಳೆಯರಿಗೆ, ತಳ್ಳುವಗಾಡಿಯಲ್ಲಿ ವ್ಯಾಪಾರ, ಬೀದಿವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ, ಅರಿಷಿನ / ಕುಂಕುಮ/ ಅಗರಬತ್ತಿ/ ಕರ್ಪೂರ, ಪಾದಚಾರಿ ಮಾರ್ಗದಲ್ಲಿ, ಟೀ / ಕಾಪಿಮಾರಾಟ, ಎಳನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ. 10, 000/-ಮೊತ್ತದ (ರೂ. 8000/-ಸಾಲ +ರೂ. 2, 000/-ಸಬ್ಸಿಡಿ) ಅಲ್ಪಾವಧಿ ಸಾಲ ಯೋಜನೆಯಾಗಿರುತ್ತದೆ.

- ಅರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.

6. **ಟ್ಯಾಕ್ಸಿ/ಗೂಡ್ಸ್ /ಪ್ಯಾಸೆಂಜರ್ ಆಟೋ ವಾಹನ ಖರೀದಿಗಾಗಿ ಸಹಾಯಧನ:-**

- 2021-22ನೇ ಸಾಲಿಗೆ ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ತಲಾ 75000/- ರೂ. ಸಹಾಯಧನ ಹಾಗೂ ಉಳಿದ ಹಣ ಬ್ಯಾಂಕ್ ಸಾಲ ಪಡೆಯಬಹುದು.
- ಫಲಾನುಭವಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.
- ಉಳಿದಂತೆ ಈ ಯೋಜನೆಯ ಅನುಷ್ಠಾನದಲ್ಲಿ ಅನುಸರಿಸಲಾಗುತ್ತಿರುವ ಷರತ್ತುಗಳಿಗೆ ಯಾವುದೇ ಬದಲಾವಣೆ ಇರುವುದಿಲ್ಲ.

(xi) **ಸಂಸ್ಥೆಯು ಹೊಂದಿರುವ/ ಸಂಸ್ಥೆಯಿಂದ ದೊರೆಯುವ ಇಲ್ಲವೆ ವಿದ್ಯುನ್ಮಾನ ರೂಪದಲ್ಲಿ ಅಳವಡಿಸಿರುವ ಸಂಸ್ಥೆಯ ಮಾಹಿತಿ ವಿವರ ಹಾಗೂ ನಾಗರೀಕರಿಗೆ ಮಾಹಿತಿಯನ್ನು ಪಡೆಯುವ ವಿವರ ಮತ್ತು ಸಂಸ್ಥೆಯ ಕೆಲಸದ ಅವಧಿ ಇತ್ಯಾದಿ.**

ನಿಗಮದಿಂದ ಲಭ್ಯವಿರುವ ಯೋಜನೆಗಳ ಮಾಹಿತಿಯನ್ನು ಮತ್ತು ಸಾರ್ವಜನಿಕರು ಸಂಸ್ಥೆಯಿಂದ ಸೌಲಭ್ಯ ಪಡೆಯುವಲ್ಲಿ ಸಲ್ಲಿಸಬೇಕಾದ ಅರ್ಜಿ ಹಾಗೂ ಮಾಹಿತಿಯನ್ನು ನಿಗಮದ ಕೇಂದ್ರ ಕಛೇರಿಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗುತ್ತದೆ. ಇದರ ಜೊತೆ ಈ ಕೆಳಕಂಡ ಕ್ರಮಗಳನ್ನು ಪ್ರಚಾರಕ್ಕಾಗಿ ವಹಿಸಲಾಗಿದೆ.

1. ನಿಗಮದ ಯೋಜನೆಗಳ ಪ್ರಚಾರಕ್ಕೆ ಸಂಬಂಧಿಸಿದಂತೆ ಕರ ಪತ್ರಗಳನ್ನು/ಕಿರುಹೊತ್ತಿಗೆಗಳನ್ನು ಮುದ್ರಣ ಮಾಡಿ ಚರ್ಚ್ ಮಸೀದಿಗಳಿಗೆ ಮತ್ತು ಜೈನ ಬಸೀದಿಗಳಿಗೆ ಕಳುಹಿಸಿಕೊಡಲಾಗುತ್ತದೆ.

Ml

2. ಜಿಲ್ಲಾ ವ್ಯವಸ್ಥಾಪಕರು ಸ್ಥಳಿಯ ಪತ್ರಕೆಗಳಲ್ಲಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆ ನೀಡಲಾಗುತ್ತದೆ.
3. ವೃತ್ತಿ ಕುಲಕಸುಬುದಾರರ ಮುಖಂಡರನ್ನು ಕೆಲವು ಜನಾಂಗಗಳ ಮುಖಂಡರನ್ನು ಆಹ್ವಾನಿಸಿ ಸಭೆಯನ್ನು ನಡೆಸಲಾಗಿದೆ. ಅವರಿಗೂ ಸಹ ಕರ ಪತ್ರಗಳನ್ನು/ಕಿರು ಹೊತ್ತಿಗೆಗಳನ್ನು ನೀಡಿ ಅವರುಗಳ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ನೀಡುವಂತೆ ತಿಳಿಸಲಾಗಿರುತ್ತದೆ.
4. ನಿಗಮದ ಜಿಲ್ಲೆಯ ವ್ಯವಸ್ಥಾಪಕರು ಪ್ರವಾಸ ಕಾಲದಲ್ಲಿ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳೊಂದಿಗೆ ಘಟಕ ತಪಾಸಣೆಗಳನ್ನು ನಿರ್ವಹಿಸುತ್ತಾರೆ.
5. ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಆಯಾ ವರ್ಷದ ಗುರಿಯನ್ನು ನಮೂದಿಸಿ ಯೋಜನೆಗಳ ವಿವರಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗುತ್ತದೆ. ಅವರೂ ಸಹ ಸುದ್ದಿ ರೂಪದಲ್ಲಿ ನಿಗಮದ ಯೋಜನೆಗಳ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಪ್ರಚಾರ ಮಾಡಲಾವುದು ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಅಧೀನದಲ್ಲಿರುವ ಮಾಹಿತಿ ಕೇಂದ್ರಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ.
6. ಅರಿವು ಯೋಜನೆಯ ಬಗ್ಗೆ ಎಲ್ಲಾ ವೃತ್ತಿಪರ ಕಾಲೇಜುಗಳ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಸಂಕ್ಷಿಪ್ತ ಮಾಹಿತಿಯನ್ನು ನೀಡಿ ಕಳುಹಿಸಿಕೊಡಲಾಗುವುದು. ಅದೇ ರೀತಿ ನಿಗಮದ ಯೋಜನೆಗಳ ಸಂಕ್ಷಿಪ್ತ ಮಾಹಿತಿಯನ್ನು ಎಲ್ಲಾ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ನೋಟಿಸ್ ಬೋರ್ಡ್‌ಗಳಲ್ಲಿ ಪ್ರಕಟಿಸುವಂತೆಯೂ ಸಹ ಮಾಹಿತಿಯನ್ನು ಕಳುಹಿಸಿಕೊಡಲಾಗುವುದು.
7. ನಿಗಮದ ಅಧಿಕಾರಿಗಳು ಘಟಕ ಪರಶೀಲನೆ ಮತ್ತು ಸಾಲ ವಸೂಲಾತಿಗೆ ಗ್ರಾಮಗಳಿಗೆ ಭೇಟಿ ನೀಡಿದಾಗ ಯೋಜನೆಗಳ ಬಗ್ಗೆ ಆ ಗ್ರಾಮದ ಜನರಿಗೆ ವಿವರಣೆ ನೀಡಲಾಗುತ್ತದೆ.
8. ಸಂಸ್ಥೆಯ ಕೆಲಸದ ಅವಧಿ: ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 10-00 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತದೆ. ಎಲ್ಲಾ ಭಾನುವಾರ, ಪ್ರತಿ ತಿಂಗಳ 2ನೇ ಮತ್ತು 4ನೇ ಶನಿವಾರ ಮತ್ತು ಸರ್ಕಾರ ಘೋಷಿಸಿರುವ ರಜಾ ದಿನಗಳಂದು ಸಂಸ್ಥೆಯು ಮುಚ್ಚಿರುತ್ತದೆ.
9. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ, ಬೆಂಗಳೂರು ನಗರ ದಕ್ಷಿಣ ಜಿಲ್ಲಾ ಕಛೇರಿಯು: ಕೊಠಡಿ ಸಂಖ್ಯೆ: ಎಸ್.ಎಫ್-2, 2ನೇ ಮಹಡಿ, ಹಮೀದ್ ಶಾ ಕಾಂಪ್ಲೆಕ್ಸ್, ಹಲಸೂರು ಗೇಟ್ ಪೋಲೀಸ್ ಸ್ಟೇಷನ್ ಹಿಂಭಾಗ, ಕಬ್ಬನ್‌ಪೇಟೆ ಮುಖ್ಯರಸ್ತೆ, ಬೆಂಗಳೂರು-560002 ಈ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿದೆ.

**(xii) ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ, ಹೆಸರು ಹುದ್ದೆ ಮತ್ತೀತರ ವಿವರಗಳು.**

2005ರ ಮಾಹಿತಿ ಹಕ್ಕು ಕಾಯ್ದೆ ಅನ್ವಯ (ಕೇಂದ್ರ ಕಾಯ್ದೆ ಸಂಖ್ಯೆ:22/2005) ಸಾರ್ವಜನಿಕ ಪ್ರಾಧಿಕಾರವು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಪ್ರಕಾರ್ಯಗಳನ್ನು ಈ

(17)

ಕಾಯ್ದೆಯಡಿಯಲ್ಲಿ ನಿರ್ವಹಿಸಲು ಹಾಗೂ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು ಈ ಕೆಳಕಂಡವರನ್ನು ನೇಮಕ ಮಾಡಲಾಗಿದೆ.

1 Appellate Authority
**ಮೇಲ್ಮನವಿ ಪ್ರಾಧಿಕಾರ**
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
12ನೇ ಮಹಡಿ, ಮುಖ್ಯ ಗೋಪುರ, ವಿಶ್ವೇಶ್ವರಯ್ಯ ಕೇಂದ್ರ,
ಡಾ|| ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001

2 Public Information Officer
**(ಸಾರ್ವಜನಿಕ ಮಾಹಿತಿ ಅಧಿಕಾರಿ)**
ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ
ಪ್ರಧಾನ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, 12ನೇ ಮಹಡಿ, ಮುಖ್ಯ ಗೋಪುರ,
ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001

3 Public Information Officer
**ಸಾರ್ವಜನಿಕ ಮಾಹಿತಿ ಅಧಿಕಾರಿ**
ಜಿಲ್ಲಾ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ವಿಭಾಗ.

(xiii) **ನಿಗಧಿಪಡಿಸಲಾದ ಇನ್ನಿತರ ಮಾಹಿತಿಗಳು:**

ಪ್ರಸ್ತುತ ಇರುವ ಮಾಹಿತಿಯನ್ನು ಅಳವಡಿಸಲಾಗಿದೆ. ಮುಂದಿನ ಪ್ರಕಟಣೆಯಲ್ಲಿ ಹೆಚ್ಚಿನ ಮಾಹಿತಿ ಕಂಡು ಬಂದರೆ, ಆ ಕಂಡಿಕೆಯಲ್ಲಿ ನಮೂದಿಸಿ ಪ್ರಕಟಿಸಲಾಗುವುದು.

Mohammed Alam
ಜಿಲ್ಲಾ ವ್ಯವಸ್ಥಾಪಕರು.
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ),
ಜಿಲ್ಲಾ ವ್ಯವಸ್ಥಾಪಕರು
ಕರ್ನಾಟಕ ಅಲ್ಪಸಂಖ್ಯಾಂತರ ಅಭಿವೃದ್ಧಿ ನಿಗಮ (ನಿ)
ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ವಿಭಾಗ